

# ದುಬಾರಿ ಮೊಬೈಲ್

ಮೊಬೈಲ್ ಈಗ ಸರ್ವವ್ಯಾಪಿ. ಕೈಗೆಟುಕುವ ದರದಲ್ಲಿ ಲಭ್ಯ ಇರುವುದರಿಂದ ಜನಸಾಮಾನ್ಯರ ಬಳಿಯಲ್ಲಿಯೂ ಮೊಬೈಲ್ ಕಾಣಿಸುತ್ತಿದೆ. ಆದರೆ ಇಲ್ಲಿ ಕಾಣುತ್ತಿರುವ ಮೊಬೈಲ್ ಅಂತಿಂತಹ ಮೊಬೈಲ್ ಅಲ್ಲ. ಖರೀದಿಸುವವರು ಹಿಂದೆ–ಮುಂದೆ ನೋಡಬೇಕು. ಯಾಕೆಂದರೆ ಈ ಮೊಬೈಲ್‌ನಲ್ಲಿ ಒಂದಲ್ಲ, ಎರಡಲ್ಲ; ಬರೊಬ್ಬರಿ 1800 ಅತ್ಯುತ್ಕೃಷ್ಟ ವಜ್ರಗಳು ಇವೆ! ಈ ವಜ್ರಗಳನ್ನು 18 ಕ್ಯಾರೆಟ್‌ನ ಬಂಗಾರದಲ್ಲಿ ಕುಂದಣಿಸಲಾಗಿದೆ. ವಿಚಿತ್ರ ವಿನ್ಯಾಸದಲ್ಲಿ ರೂಪುಗೊಂಡಿರುವ ಈ ಮೊಬೈಲ್‌ನ ಹೆಸರು ಲಿಮಿಲಿಯನ್. ತಯಾರಿಸಿದ ಕಂಪನಿಯ ಹೆಸರು ಗೋಲ್ಡ್ ವಿಷ್.

ಜಿನೇವಾ ಮೂಲದ ಗೋಲ್ಡ್ ವಿಷ್ ಕಂಪನಿಯು, ವಜ್ರಗಳನ್ನು ಚಿನ್ನದಲ್ಲಿ ಹುದುಗಿಸಿರುವ ಐಷಾರಾಮಿ ಮೊಬೈಲ್‌ಗಳನ್ನು ಗ್ರಾಹಕರ ಅಭಿರುಚಿಗೆ ತಕ್ಕಂತೆ ತಯಾರಿಸಿ ರಫ್ತು ಮಾಡುವುದರಲ್ಲಿ ಪ್ರಖ್ಯಾತಿ ಹೊಂದಿದೆ. ಈ ಲಿಮಿಲಿಯನ್ ಪ್ರಪಂಚದಲ್ಲೇ ಅತ್ಯಂತ ಬೆಲೆ ಬಾಳುವ, ಸುಂದರ ಕುಸುರಿ ಕೆಲಸದ, ಅತ್ಯುತ್ತಮ ಮೊಬೈಲ್ ಎಂಬ ಹೆಗ್ಗಳಿಕೆ ಹೊಂದಿದೆ.

ಬಿಲ್ಟ್ ಇನ್ ಕ್ಯಾಮರಾ, ಜಿಎಸ್‌ಎಮ್ ಸಪೋರ್ಟ್ ಮುಂತಾಗಿ ಆಧುನಿಕ ಸೌಲಭ್ಯವನ್ನು ಹೊಂದಿರುವ ಈ ಮೊಬೈಲ್ ಬೆಲೆ 1.3 ಮಿಲಿಯನ್ ಅಮೆರಿಕನ್ ಡಾಲರ್. ಅಂದರೆ ಸುಮಾರು 6.5 ಕೋಟಿ ರೂಪಾಯಿ! ಈ ಲಿಮಿಲಿಯನ್ ಮೊಬೈಲ್ ಜಗತ್ತಿನಲ್ಲೇ ಅತ್ಯಂತ ದುಬಾರಿ ಮೊಬೈಲ್ ಎಂದು ಗಿನ್ನೆಸ್ ರೆಕಾರ್ಡ್‌ನಲ್ಲೂ ದಾಖಲಾಗಿದೆ.

■ ವಿದ್ಯಾ ಹಾಲಭಾವಿ

